Received on
25/02/2021
NUP

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

**"ಕನ್ನಡ ಕಾಯಕ ವರ್ಷ ೨೦೨೦-೨೧"**

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-560001

ಸಂಖ್ಯೆ:ಕಾಶಿಇ/ನ್ಯಾಕ್/03/ಸುತ್ತೋಲೆ/2020-21

ದಿನಾಂಕ: 24.02.2021.

# ಸುತ್ತೋಲೆ

ವಿಷಯ: ಇಲಾಖಾ ವ್ಯಾಪ್ತಿಯ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು "ಉನ್ನತ ಶಿಕ್ಷಣದಲ್ಲಿ ಗುಣಮಟ್ಟ ನಿರ್ವಹಣಾ ವ್ಯವಸ್ಥೆ" (Quality Management System in Higher Education) ಎಂಬ ಪುಸ್ತಕವನ್ನು ಖರೀದಿಸುವ ಕುರಿತು.

ಉಲ್ಲೇಖ: ನಿರ್ದೇಶಕರು, ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ತು, ಬೆಂಗಳೂರು ಇವರ ಪತ್ರ ಸಂಖ್ಯೆ: ನಿಕ/ನ್ಯಾಕ್-ಗ್ರಂಥ ಮಾಹಿತಿ/2021-22 ದಿನಾಂಕ: 02.02.2021

*****

ಸೂಚಿತ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ತು (ನ್ಯಾಕ್) ಸಂಸ್ಥೆಯು, "ಉನ್ನತ ಶಿಕ್ಷಣದಲ್ಲಿ ಗುಣಮಟ್ಟ ನಿರ್ವಹಣಾ ವ್ಯವಸ್ಥೆ" (Quality Management System in Higher Education) ಎಂಬ ಗ್ರಂಥವನ್ನು ಹೊರತಂದಿದ್ದು ಪ್ರಸ್ತಾಪಿತವಾಗಿರುವ ಅಂಶಗಳು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ನ್ಯಾಕ್‌ನ ಮೌಲ್ಯಕರಣ ಹಾಗೂ ಮೌಲ್ಯಮಾಪನದ ಪ್ರಕ್ರಿಯೆಗಳ ಕುರಿತು ಸೂಕ್ತ ಮಾಹಿತಿ, ಮಾರ್ಗದರ್ಶನ ಹಾಗೂ ಅರಿವನ್ನು ತರುವುದಲ್ಲದೆ, ಕಾಲೇಜುಗಳಿಗೆ ಆತ್ಮವಿಶ್ವಾಸವನ್ನು ತುಂಬಿ ವಿಕಾಸದ ಹಾದಿಯಲ್ಲಿ ತೊಡಗಿಸುತ್ತದೆ ಎಂಬ ವಿಶ್ವಾಸದೊಂದಿಗೆ ಸದರಿ ಗ್ರಂಥವನ್ನು ರಚಿಸಿದ್ದು, ಹಾಗೂ ನ್ಯಾಕ್ ಮೌಲ್ಯಮಾಪನದ ವಿವಿಧ ಹಂತಗಳನ್ನು ತಿಳಿಯಲು ಹಾಗೂ ಎಸ್.ಎಸ್.ಆರ್, ಐ.ಐ.ಕ್ಯೂ.ಎ, ಎ.ಕ್ಯೂ.ಎ.ಆರ್ ಇತ್ಯಾದಿಗಳ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡುವುದಾಗಿ ತಿಳಿಸಿ, ಗ್ರಂಥದ ಬೆಲೆಯನ್ನು ರೂ. 400/- (ರೂ. ನಾಲ್ಕು ನೂರು ರೂಪಾಯಿ ಮಾತ್ರ) ಗಳಿಗೆ ನಿಗದಿಪಡಿಸಿರುವುದಾಗಿ ನ್ಯಾಕ್ ಸಂಸ್ಥೆಯ ನಿರ್ದೇಶಕರು ತಿಳಿಸಿರುತ್ತಾರೆ.

ಆದ್ದರಿಂದ ಸದರಿ ಪುಸ್ತಕವನ್ನು ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ಕಾಲೇಜಿನ ವಾಚನಾಲಯ ಖಾತೆಯಿಂದ ಸದರಿ ಪುಸ್ತಕಕ್ಕೆ ತಗಲುವ ಖರೀದಿ ವೆಚ್ಚವನ್ನು ಭರಿಸಿ ನಿಯಮಾನುಸಾರ ಖರೀದಿಸಲು ಸೂಚಿಸಿದೆ.

(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ,
ಪ್ರಾಂಶುಪಾಲರು, ಸರ್ಕಾರಿ / ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಿಗೆ

ಪ್ರತಿಯನ್ನು:
1. ಮಾನ್ಯ ಆಯುಕ್ತರ/ ನಿರ್ದೇಶಕರ/ ಹೆಚ್ಚುವರಿ ನಿರ್ದೇಶಕರ/ ಜಂಟಿ ನಿರ್ದೇಶಕರು (ಶೈಕ್ಷಣಿಕ) ಆಪ್ತ ಶಾಖೆ, ಕೇಂದ್ರ ಕಛೇರಿ, ಕಾ.ಶಿ.ಇ., ಬೆಂಗಳೂರು – ಮಾಹಿತಿಗಾಗಿ
2. ಎಲ್ಲಾ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲಬುರಗಿ – ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
3. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
4. ಕಛೇರಿ ಪ್ರತಿ.